ತರಿಸಿದರೂ, ಸೊಳ್ಳೆಗಳು ನಮ್ಮ ಪಾಲಿಗೇನೂ ದಯಾಮಯಿಯಾಗಿರಲಿಲ್ಲ. ವರ್ಣಭೇದ, ಲಿಂಗಭೇದವಿಲ್ಲದೆ ಎಲ್ಲರ ರಕ್ತ ಹೀರುವ ಕೀಟವದು.

ಚಿಕ್ಕವಳಿದ್ದಾಗ ಸೊಳ್ಳೆ ಎಂದರೆ ನೆನಪಾಗುತ್ತಿದ್ದುದು ಮಲೇರಿಯಾ ರೋಗ, ಅದು ಅನಾಫಿಲಿಸ್ ಎಂಬ ಹೆಣ್ಣುಸೊಳ್ಳೆಯ ಕಚ್ಚುವಿಕೆಯ ಬಳುವಳಿ. ನಿಂತ ನೀರಲ್ಲಿ ಮೊಟ್ಟೆಗಳಿಡುತ್ತವೆ, ಹೀಗಾಗಿ ಸುತ್ತಮುತ್ತಲಿನ ಪ್ರದೇಶ ಶುದ್ಧವಾಗಿರಬೇಕು, ರಾತ್ರಿ ಮಲಗುವಾಗ ಹಾಸಿಗೆ ಸುತ್ತ ಸೊಳ್ಳೆಪರದೆ ಕಟ್ಟಿದರೆ ಸೊಳ್ಳೆ ಬಾರದು. ಪರಿಸ್ಥಿತಿ ಹೀಗಿದ್ದರೂ ಅತೀವ ಸೊಳ್ಳೆ ಕಾಟ, ಅದರಲ್ಲೂ ಬೇಸಿಗೆಯಲ್ಲಿ, ಪ್ರತಿದಿನ ಸ್ವಯಂಸೇವಕರು ಬಂದು ಮನೆಮನೆಗೂ ಸೊಳ್ಳೆನಾಶಕ ದ್ರಾವಣವನ್ನು ಸಿಂಪಡಿಸಿ ಹೋಗುತ್ತಿದ್ದರು. ಆ ವಾಸನೆ ಸ್ವಲ್ಪ ಕಡಿಮೆಯಾಗುವವರೆಗೂ, 10–15 ನಿಮಿಷಗಳು ಮನೆಯ ಹೊರಗೆ ಕಾಯುವ ಶಿಕ್ಷೆ.

ಸೊಳ್ಳೆ ಬತ್ತಿ (ಕಾಯಿಲ್) ಬಂದರೂ ರಾತ್ರಿಕಳೆಯುವಾಗ ವೃತ್ತಾಕಾರದಲ್ಲಿ ಚಕ್ಕುಲಿ ಸುತ್ತಿದಂತೆ ಅಲ್ಲಲ್ಲಿ ಬಿದ್ದ ಬೂದಿ ಕಂಡದ್ದು ಬಿಟ್ಟರೆ, ಸೊಳ್ಳೆ ಸತ್ತು ಬಿದ್ದದ್ದೋ ಅಥವಾ ಸುಖ ನಿದ್ರೆ ಬಂದದ್ದೋ ನೆನಪಿಲ್ಲ. ಬಿಲ್ಲೆಗಳನ್ನು ಬಳಸುವ ವಿದ್ಯುತ್ ಯಂತ್ರದ್ದೂ ಅಷ್ಟೇ, ಬಣ್ಣಬಣ್ಣದ ಬಿಲ್ಲೆಗಳು ಹೊರಡಿಸುತ್ತಿದ್ದ ಪರಿಮಳ ಸ್ವಲ್ಪ ಮಟ್ಟಿಗೆ ಚೇತೋಹಾರಿ.

ಸೊಳ್ಳೆಯಿಂದ ಮುಕ್ತರಾಗಲು ಕಂಡುಕೊಂಡ ಇನ್ನೊಂದು ಉಪಾಯವೆಂದರೆ ಮಲಗುವ ಮುನ್ನ ಮುಖ ಕೈಗಳಿಗೆ ಕೊಬ್ಬರಿಎಣ್ಣೆ ಹಚ್ಚಿಕೊಳ್ಳುವುದು. ಸೊಳ್ಳೆಗಳು ಅದನ್ನು ಮೀರಿ ನೆತ್ತರು ಹೀರಿದ್ದು ಒಂದೆಡೆಯಾದರೆ ದಿಂಬಿನ ಕವರು ಹೊದ್ದಿದ್ದ ಬೆಡ್‌ಶೀಟ್‌ಗಳು ತೈಲಮಯವಾದಾಗ ಅವುಗಳನ್ನು ತೊಳೆಯುವ ಕರ್ಮ ಮತ್ತೊಂದೆಡೆ!

ನನ್ನ ಮಗಳು ಚಿಕ್ಕವಳಿದ್ದಾಗ, ಒಮ್ಮೆ ನಮ್ಮ ದೊಡ್ಡಮ್ಮನ ಮನೆಯಲ್ಲಿ ರಾತ್ರಿ ತಂಗಿದ್ದೆವು. ಸೊಳ್ಳೆಗಳು ಅಲ್ಲಿನ ಕಾಯಂ ಅತಿಥಿಗಳು. ರಾತ್ರಿಯಾಗುತ್ತಲೇ ಟೇಬಲ್ ಫ್ಯಾನ್ ಕೊಟ್ಟು, 'ನಿಮಗೆ ಉಪಯೋಗವಾದೀತು, ನಮಗೆ ಇದರ ಅಗತ್ಯವಿಲ್ಲ, ಹಾಗೇ ಮಲಗ್ತೀವಿ' ಎಂದಾಗ ಅಪಾರ ಸಂತೋಷ. ದಿಂಬಿಗೆ ತಲೆಯಾನಿಸುತ್ತಲೇ ನಾನು ಮಲಗಿಬಿಟ್ಟಿದ್ದೆ. ಅದೇ ನನ್ನ ಮಗಳು, ಅಮ್ಮ ಕೊಂಚ ಸೂಕ್ಷ್ಮ, ಸೊಳ್ಳೆ ಕಾಟದಿಂದ ತಪ್ಪಿಸಿಕೊಳ್ಳಲು ಫ್ಯಾನ್ ಹಚ್ಚಿದರೆ ಎರಡು ಸುತ್ತು ಓಡಿ ನಿಂತೇ ಹೋಗಬೇಕೆ? ನಿದ್ದೆಗೆ ಜಾರುತ್ತಿದ್ದ ದೊಡ್ಡಮ್ಮನನ್ನು ಕೇಳಲಾಗಿ 'ಫ್ಯಾನ್ ನಿಂತಾಗ ಇದರ ಸಹಾಯದಿಂದ ರೆಕ್ಕೆಗಳನ್ನು ತಿರುಗಿಸು' ಎಂದು ಕೈಗೊಂದು ಮರದ ಕೋಲನ್ನು ನೀಡಿದ್ದಾರೆ ಅಷ್ಟೇ. ಇಡೀ ರಾತ್ರಿ ಒಂದೆರಡು ಬಾರಿ ಸೊಳ್ಳೆಯಿಂದ ಕಚ್ಚಿಸಿಕೊಂಡರೂ ತೂಕಡಿಸುತ್ತಲೇ ನಿಲ್ಲುತ್ತಿದ್ದ ಫ್ಯಾನ್ ರೆಕ್ಕೆಯನ್ನು ಆಗಾಗ ಬಡಿದೆಬ್ಬಿಸಿ ಗಾಳಿಹಾಕಿಕೊಂಡೇ ಇರುಳು ಕಳೆದಿದ್ದರು!

ಚಾರ್ಜ್ ಮಾಡಿದ ಸೊಳ್ಳೆ ಬ್ಯಾಟ್, ನಂತರದ ದಿನಗಳಲ್ಲಿ ಬಂದ ಉತ್ತಮ ಸಾಧನ. ಸೊಳ್ಳೆಯ ಮೇಲೆ ಮುಟ್ಟಿಸಿದರೆ ಸಾಕು, ಚಟಪಟನೆ ಸಾಯುತ್ತವೆ. ಈ ಚಟುವಟಿಕೆ ನಮ್ಮ ಮನೆಯಲ್ಲಿ ನಿತ್ಯವೂ ನಡೆಯುತ್ತದೆ. ಸಂಜೆಯ ಪುಕ್ಕಟೆ ಮನರಂಜನೆ, 'ಇದೋ ಸೊಳ್ಳೆ, ಅದೋ ಸೊಳ್ಳೆ ಎಂದು ಮನೆಮಂದಿ ಗುರುತಿಸುವಾಗ ಅದನ್ನು ಹೊಡೆಯಲು ಬ್ಯಾಟ್ ಬೀಸಲು ಈಗ ಮನೆಯಲ್ಲಿ ಸ್ಪರ್ಧೆಯೂ ಇದೆ ಎನ್ನಿ. ಆದರೆ, ಏನಾದರೂ ಮಾಡಿ, ಸೊಳ್ಳೆಗಳು ರಾತ್ರಿಯಾಗುತ್ತಲೇ ತಮ್ಮ ಸೇಡು ತೀರಿಸಿಕೊಳ್ಳಲು, ಅದರಲ್ಲೂ ಮುಖದ ಬಳಿಯೇ ಹಾರಾಡಲೋಸುಗ ಎಲ್ಲಿ, ಹೇಗೆ ಹೊಂಚು ಹಾಕಿ, ಕಾಯುವುದೋ ಚಿದಂಬರ ರಹಸ್ಯ.

ಜಾಹಿರಾತಿನಲ್ಲಿ ಕಾಣಿಸುವ 'ಸೊಳ್ಳೆಗಳು ಹೆದರಿ ಮಾಯವಾಗುವ ರೆಪೆಲ್ಲೆಂಟ್'ಗಳು. 'ಮೊಂಡು ಸೊಳ್ಳೆಗಳಿಗೆ ಬಟನ್ ಅನ್ನು ಬಲಕ್ಕೂ ಸಾಧಾರಣ ಸೊಳ್ಳೆಕಾಟಕ್ಕೆ ಎಡಕ್ಕೂ ತಳ್ಳಿ ಸುಖನಿದ್ರೆ ಕಾಣಿ' ಎನ್ನುವ ಸುಧಾರಿತ ಪುಟಾಣಿ ಯಂತ್ರಗಳು. ಆದರೆ ನಮ್ಮ ಸೊಳ್ಳೆಗಳಿಗೆ ಅವೇನು ಮಹಾ? ನಮ್ಮನ್ನೇ ಎಡಕ್ಕೂ ಬಲಕ್ಕೂ ಹೊರಳಾಡಿಸುತ್ತವೆಯೇ ಹೊರತು ಯಾವುದಕ್ಕೂ ಜಗ್ಗವು.

ಸೊಳ್ಳೆಕಾಟದಿಂದ ಮುಕ್ತರಾಗಲು ಕೈಗೆ ಮೈಗೆ ಪೂಸಿಕೊಳ್ಳುವ ಲೇಪನ ಬಂತು. ಅದರ (ಕೆಟ್ಟ) ವಾಸನೆಗೆ ಮುಖ ಕಿವುಚಿ ವಿದಾಯ ಹೇಳಿದ್ದಾಯ್ತು. ಈಗ, ಸುಧಾರಿತ ಬಟ್ಟೆಗಳಿಗೆ ಹಚ್ಚಿಕೊಳ್ಳಲು 'ರೋಲ್ ಆನ್' ಬಂದಿದೆ. ಹಚ್ಚಿದರೆ ಮೂಗಿಗೆ ಅಡರುವ ಗಾಢ ವಾಸನೆ. ಸೊಳ್ಳೆಗಳು ಇವಕ್ಕೆ ಬಗ್ಗುವುದು ಜಾಹೀರಾತಿನಲ್ಲಿ ಮಾತ್ರವೇನೋ ಎಂಬ ಸಂಶಯವಂತೂ ಇದೆ.

ಇತ್ತೀಚೆಗೆ ಹಳ್ಳಿಯಿಂದ ಬಂದಿದ್ದ ನೆಂಟರೊಂದಿಗೆ ಬೇಸಿಗೆ, ಕರೆಂಟ್ ಕಟ್, ಸೊಳ್ಳೆಕಾಟದ ಬಗ್ಗೆ ಮಾತನಾಡುತ್ತಿದ್ದೆವು. 'ಅದೆಲ್ಲ ನಿಮ್ಮ ಸಿಟಿಯವರ ದೂರುಗಳು, ನಾವು ಅದರೊಂದಿಗೇ ಜೀವನ ಸಾಗಿಸ್ತಿದ್ದೀವಿ, ಏನೂ ಅನ್ನಿಸೋಲ್ಲ' ಎಂದು ವೈರಾಗ್ಯ ನುಡಿದುಬಿಟ್ಟರು.

ಬೇಸಿಗೆಯಲ್ಲಿ ಫ್ಯಾನ್ ಇಲ್ಲದೆ ಇರಲಾಗದು, ಫ್ಯಾನ್ ಜೋರಾಗಿ ಹಾಕಿದರೆ ಸೊಳ್ಳೆ ಬರುವುದಿಲ್ಲ ಎಂಬ ಸತ್ಯವನ್ನು ಯಾರೋ ತಿಳಿಸಿದ್ದರಿಂದ ಫ್ಯಾನ್ ಹಚ್ಚುವಿಕೆ ಮೊದಲಾಯಿತು. ಆದರೆ ಬೆನ್ನಟ್ಟಿದ ಬೇತಾಳದಂತೆ, ದುರದೃಷ್ಟ ಬಿಡಬೇಕಲ್ಲ? ಈ ಮಹಾನಗರದಲ್ಲಿ ಮೋಡ ಗುಡುಗುತ್ತಲೇ ಫಕ್ಕನೆ ಹೋದ ಕರೆಂಟ್ ವಾಪಸ್ ಬರುವಾಗ ಬರೋಬ್ಬರಿ 2–4 ತಾಸುಗಳು ಕಳೆದಿರುತ್ತವೆ. ಕರೆಂಟ್ ಇದ್ದರಲ್ಲವೇ ಫ್ಯಾನ್ ಓಡುವುದು? ಮೈಪೂರ ಹೊದ್ದು ಮಲಗಿದರೂ – ಕೆನ್ನೆ, ಮೂಗು, ಬಾಯಿ, ಕಿವಿ ಹೀಗೆ ಎಲ್ಲೆಂದರಲ್ಲಿ ನಮ್ಮ ಕೈಯಾರೆ ನಾವೇ ಹೊಡೆದುಕೊಳ್ಳುತ್ತಾ ನಿದ್ರಾವಂಚಿತರಾಗುವುದು ತೀರಾ ಸಹಜವಾಗಿಬಿಟ್ಟಿದೆ. ಹೀಗಾಗಿ ಸೊಳ್ಳೆಗಳು ಯಾವುದೇ ಭಯವಿಲ್ಲದೆ ಗುಂಯ್‌ಗುಡುತ್ತ ನಮ್ಮ ನಿದ್ದೆ ಕೆಡಿಸುವಲ್ಲಿ ಅಜೇಯ!

ಕಿವಿಯ ಹತ್ತಿರ ಜೋಗುಳ ಹಾಡಿ, ಕೆಟ್ಟ ಖುಷಿ ಕಾಣುವ ಸೊಳ್ಳೆಗೆ ಯಾವ ಜನ್ಮದಲ್ಲಿ ನಾವು ಕಾಡಿದ್ದೆವೋ ತಿಳಿಯದು. ಈ ಜನ್ಮದಲ್ಲಿ ಹೀಗೆ ನೆತ್ತರು ಹೀರಿ, ನಿದ್ದೆ ಕೆಡಿಸಿ ಆನಂದವಾಗಿ ದಿನನಿತ್ಯ ಹಾಜರಾತಿ ಕೊಡುತ್ತವೆ ಎಂಬುದಷ್ಟೇ ನಗ್ನಸತ್ಯ.

